ಒಳಗಿನಿಂದ ಎಳೆದು ಚಳ್ಳೆಹುರಿಯಿಂದ ಬಿಗಿದು ಕಟ್ಟಿಕೊಂಡರೆ ರಕ್ಷಣೆಗೆ ಅದೇ ಆಧಾರ.

"ಇಂತಲ್ಲಿ ರಾತ್ರಿ ಕಳೆಯೋದು ಹೇಗೆ ಮಾರಾಯ್ರೇ? ಹಾವು, ಹರಣೆ ನುಗ್ಗಿ ಬಂದ್ರೆ ದೇವ್ರೇ ಕಾಪಾಡ್ಬೇಕು" ಉಗುಳು ನುಂಗಿಕೊಂಡಳು ನರ್ಮದಾ.

"ಏನಾಗಲ್ಲ..." ಹೆಂಡತಿಗೆ ಹೇಳುತ್ತಾ ತನಗೆ ತಾನೇ ಧೈರ್ಯ ಕೊಟ್ಟುಕೊಂಡ ರಾಜೀವ. ಅಪ್ಪ ಕಟ್ಟಿಸಿದ್ದ ಮುಚ್ಚಿಗೆಮನೆಯೊಳಗೆ ಬೆಚ್ಚಗೆ ಸೇರಿಕೊಂಡಿರುವ ಅಣ್ಣನ ಸಂಸಾರದ ಕುರಿತು ಅಸಹನೆಯಂತಾದ್ದೇನೋ ಕಾಡತೊಡಗಿತು. 'ಇಲ್ಲಿರುವವರು ನೆಮ್ಮದಿಯಿಂದಿರಲಿ, ತನ್ನ ಭಾರವಾದರೂ ತಗ್ಗಲಿ' ಎನ್ನುವ ಉದ್ದೇಶವನ್ನೂ ಇಟ್ಟುಕೊಂಡು ಪಟ್ಟಣ ಸೇರಿಕೊಂಡಿದ್ದು ತನ್ನದೇ ತಪ್ಪೇ? 'ಕೆಟ್ಟು ಪಟ್ಟಣ ಸೇರು' ಎನ್ನುವ ಗಾದೆ ಮಾತು ಇಲ್ಲಿ ಅರ್ಥ ಕಳೆದುಕೊಂಡಿದೆ. ಪಟ್ಟಣ ಸೇರಿ ಕೆಟ್ಟಿದ್ದಾಗಿದೆ. ಇಲ್ಲೇ ಇದ್ದಿದ್ದರೆ ಅಣ್ಣನ ಹಾಗೆ ಇದ್ದಿದ್ದರಲ್ಲಿ ನೆಮ್ಮದಿ ಕಂಡುಕೊಳ್ಳಬಹುದಿತ್ತೇನೋ.

ನರ್ಮದಾ ಕನವರಿಸಿದ್ದು ಸುಳ್ಳಾಗಲಿಲ್ಲ. ರಾತ್ರಿಯಾಗುತ್ತಿದ್ದಂತೆ ರಾಜೀವನ ಎದೆಬಡಿತ ತಾಳ ತಪ್ಪತೊಡಗಿತು. ಸಣ್ಣಗೆ ಉರಿಯತ್ತಿದ್ದ ಲ್ಯಾಂಪಿನ ಮಂಕುಬೆಳಕಿನಲ್ಲಿ ಸುತ್ತಲ ಪರಿಸರ ಭೀತಿ ಹುಟ್ಟಿಸುವಂತೆ ಚಿತ್ರವಿಚಿತ್ರ ಸದ್ದುಗಳಿಂದ ಅನುರಣಿಸತೊಡಗಿತ್ತು. ಬಿಡಾರದಾಚೆಗೆ ಸ್ವಚ್ಛಂದವಾಗಿ ಓಡಾಡುತ್ತಿರುವ ಇಲಿ, ಹೆಗ್ಗಣಗಳದ್ದೋ, ಇನ್ನ್ಯಾವ ಜಂತುಗಳದ್ದೋ ಸರಪರ ಸದ್ದು. ಎಲ್ಲೋ ಊಳಿಡುವ ನರಿ. ಇನ್ನ್ಯಾವುದೋ ನಿಶಾಚರಿ ಹಕ್ಕಿಯ ಎದೆ ಝಲ್ಲೆನ್ನಿಸುವ ಕೂಗು. ರಾಜೀವನನ್ನು ಬಿಗಿದಪ್ಪಿಕೊಂಡು ಮಲಗಿದ್ದ ನರ್ಮದಾ ಬಿಸುಸುಯ್ಯುತ್ತಿದ್ದಳು. ಇಂತಾದ್ದೊಂದು ಪ್ರಸಂಗ, ಹೇಳಕೇಳುವರಿಲ್ಲದೆ ಅನಾಥರಂತೆ ಜೋಪಡಿಯಲ್ಲಿ ಕಾಲ ಕಳೆಯಬೇಕಾದ ಪರಿಸ್ಥಿತಿ ಬರುತ್ತದೆಯೆಂದು ಕನಸಲ್ಲಾದರೂ ಕಲ್ಪಿಸಿಕೊಂಡಿದ್ದಿತ್ತೇ? 'ಈ ಪರಿಸ್ಥಿತಿ ಬೇಡ' ಎಂದು ನಿರಾಕರಿಸಿದ್ದರೆ ಬಂದಲ್ಲಿಗೆ ಮರಳಿ ಹೋಗಬೇಕಾದ್ದೊಂದೇ ಉಳಿದುಕೊಂಡಿದ್ದ ಆಯ್ಕೆ. ಹೋದರೆ ಅಲ್ಲೇನಿದೆ? ಪರಿಚಿತರೇ ಅಪರಿಚಿತರಾಗಿ ವರ್ತಿಸುತ್ತಿರುವ ಸನ್ನಿವೇಶದಲ್ಲಿ ಯಾರ ಆಶ್ರಯ ಬಯಸಿ ಹೋಗಲು ಸಾಧ್ಯ?

ರಾತ್ರಿ ಕಳೆಯಿತು. ಬೆಳಗಾಯಿತು.

"ಒಂದು ದಿನ ಕಳೀತು" ನಿಟ್ಟುಸಿರಿನೊಂದಿಗೆ ಉದ್ಗರಿಸಿದ ರಾಜೀವ.

ಬೆಳಗಿನ ತಿಂಡಿಯ ಬದಲು ಮತ್ತದೇ ಗಂಜಿಯೂಟ. ನಿತ್ಯಕರ್ಮಗಳನ್ನು ತೀರಿಸಿಕೊಂಡು ಬರಲು ಹತ್ತಿರದಲ್ಲಿದ್ದ ಹಳ್ಳದ ನೀರಿನ ಆಶ್ರಯ. ಹಳ್ಳದ ನೀರಿನಲ್ಲೇ ಸ್ನಾನ, ಬಟ್ಟೆಯೊಗೆತ. ಮಗನಿಗೆಂದು ಚರಿಗೆಯಲ್ಲಿ ನೀರು ಕಾಸಿ ಸ್ನಾನದ ಶಾಸ್ತ್ರ ಮುಗಿಸಿದ್ದಳು ನರ್ಮದಾ.

"ಅವನಿಗೆ ತಣ್ಣೀರು ಕುಡಿಯೋಕೆ ಕೊಡ್ಬೇಡ. ಕಾದಾರಿದ ನೀರು ಕೊಡು..." ಎಚ್ಚರಿಸಿದ್ದ ರಾಜೀವ.

ಬರುವಾಗ ಕಟ್ಟಿ ತಂದಿದ್ದ ನಿತ್ಯೋಪಯೋಗಿ ವಸ್ತುಗಳಲ್ಲಿ ಅಗತ್ಯಕ್ಕೆ ಬೇಕಾದಷ್ಟನ್ನು ಮಾತ್ರಾ ತೆಗೆದು ಉಪಯೋಗಿಸುತ್ತಾ, ಹಗಲು ಕಳೆದು ಬಂತು ಮತ್ತೊಂದು ರಾತ್ರಿ. ಸಮೀರ ಹಟ ಮಾಡುವುದನ್ನು ಬಿಟ್ಟಿದ್ದರೂ ಕಂಗಾಲಾಗಿ ಹೋದವನಂತೆ ಪೆಚ್ಚುಗಟ್ಟಿದ್ದ. ಅಪ್ಪನ ಹೆಗಲು, ಅಮ್ಮನ ಮಡಿಲು ಅವನ ಮಂಕು ಕಳೆಯಲು ಅಸಮರ್ಥವಾಗಿದ್ದುವು. 'ಕಣ್ಣು ಕಟ್ಟಿ ಕಾಡಲ್ಲಿ ಬಿಡುವುದು' ಅಂದರೆ ಹೀಗೇನಾ? ಹೊತ್ತು ಅನ್ನುವುದು ತಲೆಯ ಮೇಲೆ ಭಾರವಾಗಿ ಕೂತು ತೆವಳುತ್ತಿದೆಯೆನ್ನುವ ಅನಿಸಿಕೆಯಿಂದ ಪ್ರಕ್ಷುಬ್ಧಳಾಗಿದ್ದಳು ನರ್ಮದಾ. ಅವತ್ತು ರಾತ್ರಿ ಮತ್ತೊಂದು ರಾಮಾಯಣ. ನಡುರಾತ್ರಿಯಲ್ಲಿ ಚಟ್ಟನೆ ಚೀರಿ ಎದ್ದು ಕೂತಿದ್ದ ಮಗ. ಎಣ್ಣೆ ಖಾಲಿಯಾಗಬಾರದೆಂಬ ಮುಂಜಾಗರೂಕತೆಯಿಂದ ರಾತ್ರಿ ಮಲಗುವಾಗ ಆರಿಸಿಟ್ಟಿದ್ದ ಲ್ಯಾಂಪು ಹಚ್ಚಿದರೆ ಮೂಲೆಯಿಂದ ಸಾಲು ಹಿಡಿದು ಬರುತ್ತಿವೆ ಇರುವೆ ಹಿಂಡು. ಒಂದು ಬದಿಯಲ್ಲಿ ಮಲಗಿದ್ದ ಸಮೀರನ ಎಳೆಮೈಗೆ ಮುತ್ತಿಗೆ ಹಾಕಿವೆ. ಅವನ ಬಟ್ಟೆಬರೆ ಕಿತ್ತೆಸೆದು, ಒದ್ದೆ ಟವೆಲಿನಿಂದ ಮೈ ವರೆಸಿ, ಇರುವೆಗಳನ್ನು ಮಟ್ಟ ಹಾಕಲು ಇಲ್ಲಿ ಯಾವ